

## ಹಳೆ ಪ್ಯಾಂಟು; ಪತ್ತೆದಾರಿ ನಂಟು!

ಅಟ್ಲಾಸ್ ಸೈಕಲ್, ದೀಪಾವಳಿ ಲಾಟರಿ, ಆಶಾ ಹೊಲಿಗೆ ಯಂತ್ರ, ಸ್ನೇಕ್ ಸೋಮಣ್ಣನ ಥ್ರಿಲ್ಲರ್ ಕಾದಂಬರಿ ಹೀಗೆ ಹಳೆಯ ಜಾಹೀರಾತು ಮಾದರಿಗಳನ್ನು ಇಟ್ಟುಕೊಂಡೇ ವಿಶಿಷ್ಟ ಪ್ರಮೋಶನ್ ಮೂಲಕ ಸಾಮಾಜಿಕ ಜಾಲತಾಣದಲ್ಲಿ ಸುದ್ದಿ ಮಾಡುತ್ತಿದೆ ಜಯತೀರ್ಥ ನಿರ್ದೇಶನದ ಸಿನಿಮಾ 'ಬೆಲ್ ಬಾಟಂ'. ಟಿ.ಕೆ. ದಯಾನಂದ ಈ ಚಿತ್ರಕ್ಕೆ ಕಥೆ ಬರೆದಿದ್ದಾರೆ. ಪತ್ತೆದಾರಿ ಕಥೆಯ ಎಳೆ ಹೊಂದಿರುವ ಈ ಸಿನಿಮಾ ಹಾಸ್ಯದ ರಸದೌತಣವನ್ನೂ ಬಡಿಸುವ ಸೂಚನೆಯನ್ನು ಟೀಸರ್‌ನಲ್ಲಿಯೇ ನೀಡಿದೆ. 'ಏತಕೆ ಬೊಗಸೆ ತುಂಬ ಕನಸು ತುಂಬುವೆ' ಎಂಬ ಹಾಡು ಈಗಾಗಲೇ ಕ್ರೇಜ್ ಹುಟ್ಟಿಸಿದೆ.

ಬೆಲ್ ಬಾಟಂ ಪ್ಯಾಂಟು ಹಾಕಿಕೊಂಡು ಎಡವಟ್ಟು ಡಿಟೆಕ್ಟೀವ್ ರೂಪದಲ್ಲಿ ರಿಷಬ್ ಶೆಟ್ಟಿ ನಟಿಸಿರುವ ಈ ಚಿತ್ರದಲ್ಲಿ ಸೈಕಲ್ ತುಳಿಯುವ ದೊಡ್ಡ ತುರುಬಿನ ಹುಡುಗಿಯಾಗಿ ಹರಿಪ್ರಿಯಾ ಕಾಣಿಸಿಕೊಂಡಿದ್ದಾರೆ. ಶೀರ್ಷಿಕೆಯೇ ಹೇಳುವ ಹಾಗೆ 'ಬೆಲ್ ಬಾಟಂ' ಪ್ಯಾಂಟುಗಳು ಕ್ರೇಜ್ ಹುಟ್ಟಿಸಿದ್ದ ದಿನದಲ್ಲಿ ನಡೆಯುವ ಸಿನಿಮಾ ಇದು. ಹಾಗಾಗಿ ಅದೇ ಕಾಲದಲ್ಲಿ ಚಾಲ್ತಿಯಲ್ಲಿದ್ದ ಜನಪ್ರಿಯ ಉತ್ಪನ್ನಗಳ ಜಾಹೀರಾತುಗಳನ್ನು ಈ ಚಿತ್ರದ ಪ್ರಮೋಷನ್‌ಗಾಗಿ ಬಳಸಿಕೊಳ್ಳಲಾಗಿದೆ. ಚಿತ್ರದ ತಾಂತ್ರಿಕ ವರ್ಗವನ್ನೂ ಅದೇ ಶೈಲಿಯಲ್ಲಿಯೇ ತಂಡ ಪರಿಚಯಿಸಿಕೊಡುತ್ತಿದೆ.

ಯೋಗರಾಜ್ ಭಟ್, ಶಿವಮಣಿ, ಪ್ರಮೋದ್ ಶೆಟ್ಟಿ, ಅಚ್ಯುತ್ ಕುಮಾರ್ ಸೇರಿದಂತೆ ಹಲವು ಘಟಾನುಘಟಿ ನಟರು ನಟಿಸಿರುವ ಈ ಸಿನಿಮಾ ಫೆ. 15ಕ್ಕೆ ತೆರೆಗೆ ಬರಲು ಸಜ್ಜಾಗಿದೆ. ಹಳೆಯ ಪ್ಯಾಂಟಿನ ಜತೆಗೆ ಹೊಸ ನಂಟನ್ನು ಬೆಸೆಯುವ ಪ್ರಯತ್ನದಂತೆ ಕಾಣಿಸುವ ಈ ಚಿತ್ರವನ್ನು ಪ್ರೇಕ್ಷಕರು ಹೇಗೆ ಸ್ವೀಕರಿಸುತ್ತಾರೋ ನೋಡಬೇಕು.



## ಯೂಟ್ಯೂಬ್ ರಾಣಿಯ ಕೆಂಡದಂಥ ಕೋಪ!

'ನನ್ನ ಅಭಿಮಾನಿಗಳ ಸುದ್ದಿಗೆ ಬರಬೇಡಿ' ಟ್ವಿಟರ್‌ನಲ್ಲಿ ತಮ್ಮ ಅಭಿಮಾನಿಗಳನ್ನು ಆಡಿಕೊಳ್ಳುತ್ತಿದ್ದವರಿಗೆ ಹೀಗೆ ಅವಾಜ್ ಹಾಕಿದ್ದು ರಶ್ಮಿಕಾ ಮಂದಣ್ಣ. ಮುಗುಳುನಗೆಯ ಮೂಲಕವೇ ಹರೆಯದವರ ಎದೆಯಲ್ಲಿ ಹೂ ಅರಳಿಸುವ ಈ ನಟಿ ಒಮ್ಮಿಂದೊಮ್ಮೆಲೇ 'ಕೆಂಡ'ಸಂಪಿಗೆಯಾಗಲೂ ಕಾರಣವಿದೆ.

ರಶ್ಮಿಕಾ ಮಂದಣ್ಣ ಕರ್ನಾಟಕ ಫ್ಯಾನ್ಸ್ ಕ್ಲಬ್ ಟ್ವಿಟರ್ ಖಾತೆಯಲ್ಲಿ, 'ರಶ್ಮಿಕಾ ಮಂದಣ್ಣ ಯುಟ್ಯೂಬ್ ರಾಣಿ. ಅವರು ನಟಿಸಿರುವ ಕನ್ನಡದ ಎರಡು ಹಾಡುಗಳು ಯೂಟ್ಯೂಬ್‌ನಲ್ಲಿ ಐದು ಕೋಟಿ ಮತ್ತು ತೆಲುಗಿನಲ್ಲಿ ನಟಿಸಿರುವ ಎರಡು ಹಾಡುಗಳು 10 ಕೋಟಿ ವೀಕ್ಷಣೆ ಪಡೆದಿವೆ. ಈ ಹೆಗ್ಗಳಿಕೆ ಪಡೆದ ಕನ್ನಡದ ಏಕಮಾತ್ರ ನಟಿ ರಶ್ಮಿಕಾ' ಎಂದು ಬರೆಯಲಾಗಿತ್ತು.

ಈ ಪೋಸ್ಟ್ ನೋಡಿದ ಒಬ್ಬ 'ಇದೊಂದು ದೊಡ್ಡ ಜೋಕ್. ರಶ್ಮಿಕಾ ನಿಮ್ಮ ಫ್ಯಾನ್ಸ್ ಪೇಜ್‌ಗಳಿಗೆ ರಾಣಿಯೇ ಹೊರತು ಯೂಟ್ಯೂಬ್‌ಗಲ್ಲ. ಇಲ್ಲಿ ಅವರನ್ನು ಯಾರೂ ಕೇರ್ ಮಾಡುವುದಿಲ್ಲ. ಈ ಪೋಸ್ಟ್ ಅನ್ನು ಯೂಟ್ಯೂಬ್‌ನವರೇನಾದರೂ ನೋಡಿದರೆ ನಗುತ್ತಾರೆ' ಎಂದು ವ್ಯಂಗ್ಯವಾಡಿದ್ದರು.

ಈ ಜಗಳ ಹೀಗೆ ಮುಂದುವರಿಯುತ್ತಿದ್ದಂತೆಯೇ ಸ್ವತಃ ಅಖಾಡ ಪ್ರವೇಶಿಸಿದ ರಶ್ಮಿಕಾ, ಅಭಿಮಾನಿಗಳ ಪರವಾಗಿ ಗುರಾಣಿ ಹಿಡಿದು ನಿಂತಿದ್ದಾರೆ. ತಮ್ಮ ಫ್ಯಾನ್ಸ್ ಜತೆಗೆ ಕಾಲು ಕೆರೆದು ನಿಂತಿರುವ ವ್ಯಕ್ತಿಯನ್ನು ಉದ್ದೇಶಿಸಿ 'ಸರ್ ನೀವು ಏನು ಬೇಕಾದ್ರೂ ಹೇಳಿ. ಆದ್ರೆ ನನ್ನ ಅಭಿಮಾನಿಗಳ ಬಗ್ಗೆ ಮಾತ್ರ ಮಾತನಾಡಬೇಡಿ' ಎಂದು ಗುರುಗುಟ್ಟಿದ್ದಾರೆ. ಅಷ್ಟೇ ಅಲ್ಲ, 'ಹೀಗೆಲ್ಲ ಮಾಡಿ ನನ್ನ ಸಮಯವನ್ನೂ ಹಾಳುಮಾಡುತ್ತಿದ್ದೀರಿ' ಎಂದೂ ಗದರಿದ್ದಾರೆ. ಮುದ್ದು ಮುಖದ ರಶ್ಮಿಕಾ ಹುಬ್ಬು ಗಂಟಿಕ್ಕಿದ್ದನ್ನು ನೋಡಿ ಇನ್ನಷ್ಟು ಉತ್ತೇಜಿತರಾಗಿಯೋ ಏನೋ ಇನ್ನೊಬ್ಬ ವ್ಯಕ್ತಿ 'ನೀವು ಸಮಯ ಹಾಳು ಮಾಡಬೇಡಿ ಎಂಬುದನ್ನು ಹೇಳಲಿಕ್ಕಾಗಿ ಏಳು ಸಾಲುಗಳ ಕಮೆಂಟ್ ಮಾಡಿದ್ದೀರಿ. ಪ್ರತಿ ಸಾಲಿಗೆ 15 ಸೆಕೆಂಡ್‌ಗಳಾದರೂ ಬೇಕು. ಒಟ್ಟಾರೆ 1.45 ನಿಮಿಷಗಳನ್ನು ಯಶಸ್ವಿಯಾಗಿ ಹಾಳುಮಾಡಿದ್ದೀರಿ' ಎಂದು ವ್ಯಂಗ್ಯವಾಗಿ ಕೆಣಕಿದ್ದಾರೆ. ಈ ಟ್ವಿಟರ್ ಜಗಳದ ಸಹವಾಸ ಸಾಕು ಎಂದು ಅನಿಸಿಯೋ ಏನೋ ರಶ್ಮಿಕಾ ಮತ್ತೆ ಪ್ರತಿಕ್ರಿಯಿಸಲು ಹೋಗಿಲ್ಲ.